**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ ಸಿ 2232/2021**

**ಅರ್ಜಿಯ ಮೇರೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ 05-12-2024** **ಪಿ ಡಬ್ಲ್ಯೂ 1**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಟೈಲರಿಂಗ್ ಕೆಲಸ ಮಾಡುತ್ತೇನೆ. ಆರೋಪಿ ನನ್ನ ದೊಡ್ಡಮ್ಮನ ಮೊಮ್ಮಗ. ಆರೋಪಿ ಹುಟ್ಟಿದಾಗಿನಿಂದಲೂ ನನಗೆ ಪರಿಚಯ. ಆರೋಪಿ ಬೆಂಗಳೂರಿನಲ್ಲಿ ಹಾಲಿನ ವ್ಯಾಪಾರ ಮಾಡುತ್ತಾರೆ. ಅದೇ ರೀತಿ ಟೀ ಮತ್ತು ಬೀಡಾ ಅಂಗಡಿಯನ್ನು ಸಹ ಇಟ್ಟುಕೊಂಡಿದ್ದಾರೆ. ನಮ್ಮ ಮನೆಯಲ್ಲಿ ನಾನು ನನ್ನ ಗಂಡ ಇದ್ದೇವೆ. ನನ್ನ ಗಂಡ ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ. ನನಗೆ ತಿಂಗಳಿಗೆ 20 ರಿಂದ 25 ಸಾವಿರ ರೂ ಆದಾಯ ಬರುತ್ತದೆ. ನನ್ನ ಮತ್ತು ನನ್ನ ಗಂಡನ ಆದಾಯವನ್ನು ಸೇರಿಸಿ ಒಂದು ವರ್ಷಕ್ಕೆ ಖರ್ಚನ್ನು ತೆಗೆದು ಸುಮಾರು 2 ರಿಂದ 2 1/2 ಲಕ್ಷ ರೂ ಉಳಿತಾಯ ಆಗುತ್ತದೆ. ಆರೋಪಿಗೆ ತಿಂಗಳಿಗೆ 70-80 ಸಾವಿರ ರೂ ಆದಾಯ ಇದೆ ಎಂದರೆ ಸರಿ. ಅದೇ ರೀತಿ ಆರೋಪಿಗೆ ನುಲೇನೂರಿನಲ್ಲಿ ಸ್ವಂತ ಮನೆ ಇದೆ ಎಂದರೆ ಸರಿ. ಆರೋಪಿ ಆರ್ಥಿಕವಾಗಿ ಚೆನ್ನಾಗಿ ಇದ್ದಾರೆ ಎಂದರೆ ಸರಿ.

ನಾನು ಆರೋಪಿಗೆ 10 ಲಕ್ಷ ರೂ ನೀಡಿರುತ್ತೇನೆ. ನಾನು ಹಣವನ್ನು ನೀಡುವ 3 ತಿಂಗಳ ಮುಂಚಿತವಾಗಿ ಆರೋಪಿ ಹಣವನ್ನು ಕೇಳುತ್ತಿದ್ದರು. ಆರೋಪಿ ತನ್ನ ವ್ಯವಹಾರವಕ್ಕೆ ಹಣವನ್ನು ಪಡೆದಿರುತ್ತಾರೆ. ಆರೊಪಿಗೆ ಹಣವನ್ನು ನಮ್ಮ ಮನೆಯಲ್ಲಿ ನೀಡಿರುತ್ತೇನೆ. ಆರೋಪಿಗೆ ಹಣ ನೀಡುವಾಗ ನಾನು ನನ್ನ ಗಂಡ ಮತ್ತು ಆರೋಪಿ ಇದ್ದೆವು. ಆರೋಪಿಗೆ ಹಣ ಕೊಡುವಾಗ ಯಾವುದೇ ಬರವಣಿಗೆ ಮಾಡಿಕೊಂಡಿಲ್ಲ. ಆರೋಪಿಗೆ ನೀಡಿದ್ದೇವೆ ಎಂದು ಹೇಳಲಾದ ಅಷ್ಟು ಹಣ ನಿಮಗೆ ಎಲ್ಲಿಂದ ಬಂತು ಎಂದರೆ ಸಾಕ್ಷಿಯು ನನ್ನ ತವರು ಮನೆಯವರು ಆಸ್ತಿಯನ್ನು ಪಾಲು ಮಾಡಿಕೊಂಡಿದ್ದರು. ಆ ಸಂದರ್ಭದಲ್ಲಿ ನನಗೆ ಹಣ ನೀಡಿರುತ್ತಾರೆ ಮತ್ತು ನಮ್ಮ 1 ಸೈಟನ್ನು ಸಹ ಮಾರಾಟ ಮಾಡಿರುತ್ತೇವೆ. ಅಷ್ಟು ಹಣ ನನ್ನ ಬಳಿ ಇದ್ದ ಬಗ್ಗೆ ದಾಖಲಾತಿಗಳನ್ನು ಸಲ್ಲಿಸುತ್ತೇನೆ. ಆರೋಪಿಗೆ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. 20 ಸಾವಿರಕ್ಕಿಂತ ಹೆಚ್ಚಿನ ಹಣವನ್ನು ನಗದು ರೂಪದಲ್ಲಿ ನೀಡಬಾರದು ಎಂದು ನನಗೆ ಗೊತ್ತಿಲ್ಲ. ನಮ್ಮ ಮನೆಯಲ್ಲಿ ಸಾಮಾನ್ಯವಾಗಿ 1 ಲಕ್ಷ ರೂಗಳಷ್ಟು ಹಣ ಇಟ್ಟುಕೊಂಡಿರುತ್ತೇವೆ. ನಾನು ಆದಾಯ ತೆರಿಗೆ ಪಾವತಿದಾರಳಲ್ಲ. ಆರೋಪಿಗೆ ನೀಡಿದ 10 ರೂಗಳಿಗೆ ಆದಾಯ ತೆರಿಗೆ ಪಾವತಿ ಮಾಡಿಲ್ಲ. ಆರೋಪಿ 3 ತಿಂಗಳ ಒಳಗಾಗಿ ಹಣವನ್ನು ಮರುಪಾವತಿ ಮಾಡುತ್ತೇನೆ ಎಂದು ಹಣವನ್ನು ಪಡೆದಿದ್ದರು. ದಿಃ 30.07.2021 ರಂದು ಆರೋಪಿಗೆ ನೋಟೀಸನ್ನು ನೀಡಿರುತ್ತೇವೆ. ಸದರಿ ನೋಟೀಸ್ ಯಾವ ದಿನ ಜಾರಿಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಿಃ 08.04.2021 ರಂದು ನಾನು ಚೆಕ್ ನ್ನು ನಗದೀಕರಣಕ್ಕೆ ಬ್ಯಾಂಕಿಗೆ ಸಲ್ಲಿಸಿರುತ್ತೇನೆ. ಆರೋಪಿ 1 ಚೆಕ್ ನ್ನು ಮಾತ್ರ ನೀಡಿದ್ದರು. ಆರೋಪಿ ನಿಪಿ.1 ನ್ನು ನೀಡುವ ಸಂದರ್ಭದಲ್ಲಿ ಅದರ ಮೇಲೆ ದಿನಾಂಕವನ್ನು ನಮೂದಿಸಿರಲಿಲ್ಲ ಎಂದರೆ ಸರಿಯಲ್ಲ. ನಿಪಿ.1 ರಲ್ಲಿರುವ ಬರವಣಿಗೆ ಶಾಹಿಗೂ ಮತ್ತು ಸಹಿಯ ಶಾಹಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು

ಆರೋಪಿಯೇ ಬರೆಸಿಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ. ಆರೋಪಿಗೆ 20 ಸಾವಿರ ರೂ ಗಳನ್ನು ಶೇಕಡಾ 10 ರ ಬಡ್ಡಿಯಂತೆ ಸಾಲ ನೀಡಿದ್ದೆನು ಎಂದರೆ ಸರಿಯಲ್ಲ. ಸಾಲವನ್ನು ನೀಡುವ ಸಂದರ್ಭದಲ್ಲಿ ಆರೋಪಿಯಿಂದ ನಾನು ಸಹಿ ಮಾಡಿದ ಖಾಲಿ ಚೆಕ್ ನ್ನು ಪಡೆದಿದ್ದೆನು ಎಂದರೆ ಸರಿಯಲ್ಲ. ನನಗೆ ಬರಬೇಕಾದ ಹಣ ಬಂದ ಮೇಲೆ ಖಾಲಿ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಈ ರೀತಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

(ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ